ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN ; U40109KA2004SGC035177
ನೊಂದಾಯಿತಕಚೇರಿ ವಿಳಾಸ ನಂ 29
ಕಾವೇರಿಗ್ರಾಮೀಣ ಬ್ಯಾಂಕ್‌ರಸ್ತೆ
ವಿಜಯನಗರ 2 ನೇಹಂತ ಮೈಸೂರು-570017

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ರವರಕಚೇರಿ ಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಹುಣಸೂರು
Ph.: 08222 – 252056

ನಿಗಮ ಇ-ಮೇಲ್ :WWW.CESCMYSORE.ORG
email:aeehun@cescmysore.org

ಸಂಖ್ಯೆ:ಸಕಾನಿಇಂ(ವಿ)/ಹುಣ/ಸಇಂ(ತಾ)/2017-18/ 3188-91

ದಿನಾಂಕ: 22-3-18

ದಿನಾಂಕ 13-03-2018ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಚೇರಿ) ಶ್ರೀ ಸೋಮರಾಜುರವರ ಅಧ್ಯಕ್ಷತೆಯಲ್ಲಿ ನಡೆದ ಹುಣಸೂರು ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು**

1. ಶ್ರೀ ಸೋಮರಾಜು ರವರು, ಕಾರ್ಯನಿರ್ವಾಹಕ ಇಂಜಿನಿಯರ್(ಕಚೇರಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು
2. ಶ್ರೀ ನಾಗೇಶ್ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು
3. ಶ್ರೀ ಕಲೀಂ ಅಹಮ್ಮದ್, ಸಹಾಯಿಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
4. ಶ್ರೀ ಶಿವಪ್ರಸಾದ್ ಆರ್.ಬಿ, ಸಹಾಯಿಕ ಇಂಜಿನಿಯರ್(ವಿ)(ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
5. ಶ್ರೀ ಪುರುಷೋತ್ತಮ್, ಸಹಾಯಿಕ ಇಂಜಿನಿಯರ್ (ವಿ), ಪಟ್ಟಣ ಶಾಖೆ, ಹುಣಸೂರು
6. ಶ್ರೀ ಚನ್ನಕೇಶವ, ಕಿರಿಯ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ರತ್ನಪುರಿ ಶಾಖೆ
7. ಶ್ರೀ ಶಂಬುಲಿಂಗಯ್ಯ ಕಿರಿಯ ಇಂಜಿನಿಯರ್(ಪ್ರಭಾರ)(ವಿ) ಶಾಖಾಧಿಕಾರಿಗಳು ಹನಗೂಡು ಶಾಖೆ
8. ಶ್ರೀ ತ್ಯಾಗರಾಜು ಕಿರಿಯ ಇಂಜಿನಿಯರ್ ಶಾಖಾಧಿಕಾರಿಗಳು ಬಿಲ್ಲಂದ ಶಾಖೆ
9. ಶ್ರೀ ಮಂಜುನಾಥ್, ಕಿರಿಯ ಇಂಜಿನಿಯರ್ ಶಾಖಾಧಿಕಾರಿಗಳು ಗಾವಡಗೆರೆ ಶಾಖೆ

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಚೇರಿ) ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆಎಂದು ಸಭೆಗೆ ತಿಳಿಸಿದರು.

ಸಹಾಯಿಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ರವರು ಮಾತನಾಡಿ ಈ ಹಿಂದಿನ ಜನ ಸಂಪರ್ಕ ಸಭೆಯಲ್ಲಿ ಚರ್ಚಿಸಿದ ಒಟ್ಟು 18 ಸಂಖ್ಯೆ ಸಮಸ್ಯೆಗಳಲ್ಲಿ 15 ಸಂಖ್ಯೆ ಸಮಸ್ಯೆಗಳನ್ನು ಬಗೆಹರಿಸಲಾಗಿದ್ದು ಉಳಿದ 03 ಸಂಖ್ಯೆ ಸಮಸ್ಯೆಗಳಿಗೆ ಕಾಮಗಾರಿಯು ಮಂಜೂರಾತಿ ಹಂತದಲ್ಲಿರುವುದಾಗಿ ಸಭೆಗೆ ತಿಳಿಸಿದರು.

**ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿದೆ.**

ಮು.ತಿ.ನೋ

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
| --- | --- | --- | --- |
| 1. | ಶ್ರೀ ನಿಂಗರಾಜಪ್ಪ ಕಿರಿಜಾಜಿ. 8453548106. | .ಕೆ.ಎಂ ವಾಡಿಯಲ್ಲಿ ವಿ.ವಿ.ಕೇಂದ್ರ ಬೇಕಿರುತ್ತದೆ ಎಂದು ಕೋರಿದರು.<br><br>.ಕಿರಿಜಾಜಿ ಗ್ರಾಮದಲ್ಲಿ 1970 ರಲ್ಲಿ ಕಂಬಗಳನ್ನು ಅಳವಡಿಸಿದ್ದು ಈಗ ಶಿಥಿಲಗೊಂಡಿದ್ದು ಬದಲಾಯಿಸಿಕೊಡಬೇಕೆಂದು ಕೋರಿದರು.. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ)ರವರು ಮಾತನಾಡಿ ಈ ಭಾಗದಲ್ಲಿ 220 ಕೆ ವಿ ವಿ ವಿ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಉತ್ತರಿಸಿದರು<br><br>ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ)ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 2. | ಶ್ರೀ ಲೋಕೇಶ್. ಕಾಳೆನಹಳ್ಳಿ. 9900305598 | .ಕಾಳೇನಹಳ್ಳಿಯ ಐ.ಪಿ ಪರಿವರ್ತಕ ವಿಫಲಗೊಂಡಿದ್ದು ಬದಲಾಯಿಸಿಕೊಡಬೇಕೆಂದು ಕೋರಿದರು | .ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಮಾತನಾಡಿ ವಿಫಲಗೊಂಡ ಪರಿವರ್ತಕವನ್ನು ಈಗಾಲೆ ಬದಲಾಯಿಸಿದ್ದು ಅನಧಿಕೃತ ಬಳಕೆದಾರರು ಪುನರ್‌ಸಂಪರ್ಕ ಪಡೆದ ಕಾರಣ ಪರಿವರ್ತಕ ಪುನಃ ವಿಫಲಗೊಂಡಿರುತ್ತದೆ ಎಂದು ತಿಳಿಸಿದರು.<br>ನಂತರ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ)ರವರು ಮಾತನಾಡಿ ಅನಧಿಕೃತ ಬಳಕೆದಾರರ ಸಂಪರ್ಕ ಕಡಿತಗೊಳಿಸಿ ವಿಫಲಗೊಂಡ ಪರಿವರ್ತಕವನ್ನು ಬದಲಾಯಿಸಿ ಅನಧಿಕೃತ ಬಳಕೆದಾರರು ಸಕ್ರಮಗೊಳಿಸಿಕೊಂಡ ನಂತರ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಸೂಚಿಸಿದರು |
| 3. | ಶ್ರೀ ಮೊಹಮದ್ ಜಾವೆದ್. ಹಂಚ್ಯಾ. 9342131657 | .25 ಕೆ.ವಿ.ಎ ಪರಿವರ್ತಕದಲ್ಲಿ 7 ಐ.ಪಿ.ಸೆಟ್‌ಗಳಿದ್ದು ಲೊ ವೋಲ್ಟೆಜ್ ಸಮಸ್ಯೆ ಇರುವುದಾಗಿ ತಿಸಿಸಿದರು | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಸದರಿ ಪರಿವರ್ತಕದಲ್ಲಿ ಕೇವಲ 5ಜನ ಸಕ್ರಮ ಬಲಕೆದಾರರಿದ್ದು ಅನಧಿಕೃತ ಐ.ಪಿ.ಸೆಟ್ ಗಳನ್ನು ಕಡಿತಗೊಳಿಸಲಾಗುವುದು ಎಂದು ತಿಳಿಸಿದರು |

ಮು.ಪು.ನೋ

| | | | |
|---|---|---|---|
| 4. | ಶ್ರೀ ಗೋಂವಿದಯ್ಯ<br>ತಮ್ಮಡಹಳ್ಳಿ.<br>8971274996. | .ತಮ್ಮಡಹಳ್ಳಿ ಐ.ಪಿ ಪರಿವರ್ತಕವು ಅಧಿಕ ಒತ್ತಡದಿಂದ ಕೂಡಿದ್ದು ಹೆಚ್ಚುವರಿ ಪರಿವರ್ತಕ ಬೇಕಿರುತ್ತದೆ ಎಂದು ಕೋರಿದರು | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಚೇರಿ)ರವರು ಮಾತನಾಡಿ ಅನಧಿಕೃತ ಬಳಕೆದಾರರ ಸಂಪರ್ಕ ಸಕ್ರಮಗೊಂಡ ನಂತರ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕ್ರಮ ಕೈಗೊಳಲಾಗುವುದು ಅಲ್ಲಿಯವರೆಗು ಅನಧಿಕೃತ ಐ.ಪಿ.ಸೆಟ್ ಗಳನ್ನು ಕಡಿತಗೊಳಿಸಲಾಗುವುದು ಎಂದು ತಿಳಿಸಿದರು |
| 5. | ಶ್ರೀ ರವಿಕುಮಾರ್<br>9448260245 | .ಐ.ಪಿ ಸೆಟ್ ಗಳನ್ನು ಸಕ್ರಮಗೊಳಿಸಲು ವಾಟರ್ ರೈಟ್ ಸರ್ಟಿಫಿಕೇಟನ್ನು ಪಂಚಾಯಿತಿ ಅಧಿಕಾರಿಗಳು ನೀಡುತ್ತಿರುವುದಿಲ್ಲ ಆದ್ದರಿಂದ ಸದರಿ ದಾಖಲೆಯನ್ನು ಕಡ್ಡಾಯಗೊಳಿಸಬಾರದೆಂದು ಕೋರಿದರು | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ)ರವರು ಮಾತನಾಡಿ ಸದರಿ ವಿಷಯದ ಬಗ್ಗೆ ಮೆಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. |
| 6. | ಶ್ರೀ ಜಯಣ್ಣ,<br>ಯಿಮಗುಂಭ.<br>9611248354 | .ಯಿಮಗುಂಭ ಗ್ರಾಮದಲ್ಲಿ ಸುಮಾರು 20 ಮನೆಗಳಿಗೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಬೇಕಿರುತ್ತದೆ ಎಂದು ಕೋರಿದರು | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಸದರಿ ಸಮಸ್ಯೆಯನ್ನು ಕಳೆದ ಜನಸಂಪರ್ಕ ಸಭೆಯಲ್ಲಿ ಚರ್ಚಿಸಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿದರು |
| 7. | ಶ್ರೀ ಆಲಿಜಾನ್,<br>ರತ್ನಪುರಿ.<br>9731257664 | .ಗೌಡನಕಟ್ಟೆ ಗ್ರಾಮಕ್ಕೆ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ ಎಂದು ದೂರಿದರು | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಸದರಿ ಫೀಡರ್ ಅಧಿಕ ಒತ್ತಡದಿಂದ ಕೂಡಿದ್ದು "ವೈ" ಆಪರೇಷನ್ ಚಾಲನೆಯಲ್ಲಿರುತ್ತದೆ ಎಂದು ತಿಳಿಸಿದರು.<br>ನಂತರ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ)ರವರು ಮಾತನಾಡಿ ಸದರಿ ಫೀಡರ್ ನಲ್ಲಿ ರಾತ್ರಿ ಪಾಳಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ತೊಂದರೆ ಇದ್ದಲ್ಲಿ ಹಗಲು ಪಾಳಿಯಲ್ಲಿ 2 ಪಾಳಿ ವಿದ್ಯುತ್ ಸರಬರಾಜು ಮಾಡಲು ವಿಭಾಗೀಯ ಕಚೇರಿಗೆ ಕೋರಿಕೆ ಸಲ್ಲಿಸಲು ತಿಳಿಸಿದರು. |
| 8. | ಶ್ರೀ ಸಚಿತ್<br>ಪತ್ರಕರ್ತರು<br>9480165454. | .ಕೆ.ಎಂ.ವಾಡಿ ಐ.ಪಿ ಪರಿವರ್ತಕವು ಅಧಿಕ ಒತ್ತಡದಿಂದ ಕೂಡಿದ್ದು ಹೆಚ್ಚುವರಿ ಪರಿವರ್ತಕ ಬೇಕಿರುತ್ತದೆ ಎಂದು ಕೋರಿದರು | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ)ರವರು ಮಾತನಾಡಿ ಅನಧಿಕೃತ ಬಳಕೆದಾರರ ಸಂಪರ್ಕ ಸಕ್ರಮಗೊಂಡ ನಂತರ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕ್ರಮ ಕೈಗೊಳಲಾಗುವುದು ಅಲ್ಲಿಯವರೆಗು ಅನಧಿಕೃತ ಐ.ಪಿ.ಸೆಟ್ ಗಳನ್ನು ಕಡಿತಗೊಳಿಸಲಾಗುವುದು ಎಂದು ತಿಳಿಸಿದರು. |

| | | | |
|---|---|---|---|
| ೨ | ಶ್ರೀ ಚಂದ್ರಶೇಖರ್, ಮೂಕನಹಳ್ಳಿ, 9008770416 | .ಗಾವಡಗೆರೆ/ಬೋಳನಹಳ್ಳಿ ಶಾಖಾಧಿಕಾರಿಗಳು ಅನಿಮಿಯಿತವಾಗಿ ಲೈನ್ ಕ್ಲಿಯರ್ ತೆಗೆದುಕೊಳ್ಳುತ್ತಿದ್ದು ವಿದ್ಯುತ್ ಸಮರ್ಪಕವಾಗಿ ಪೂರೈಕೆಯಾಗದೆ ಕೈಗಾರಿಕೆ ನಡೆಸಲು ಅನಾನುಕೂಲವಾಗಿದೆ ಎಂದು ಹೇಳಿದರು | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ರವರು ಮಾತನಾಡಿ ಸದರಿ ಫೀಡರ್ ಎರಡು ಶಾಖೆಗಳೊಂದಿಗೆ ಹಂಚಿಕೆಯಾಗಿರುವುದರಿಂದ ಸಮಸ್ಯೆ ಉಂಟಾಗಿರುತ್ತದೆ ಎಂದು ತಿಳಿಸಿದರು. ನಂತರ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ)ರವರು ಮಾತನಾಡಿ ಸದರಿ ಫೀಡರ್‌ಗೆ ಲಿಂಕ್ ಲೈನ್ ಕಲ್ಪಿಸಲು ಅವಕಾಶವಿದ್ದಲ್ಲಿ ಅಗತ್ಯ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು |

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ). ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂದಪಟ್ಟಂತೆ ಅಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಾಮನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ದನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ:- 35

ತಮ್ಮ ವಿಶ್ವಾಸಿ

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಹುಣಸೂರು.

ಪ್ರತಿಗಳು:-

1. ಮಾನ್ಯ ಅಧೀಕ್ಷಕಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನೋಡಲ್‌ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ, ಹೂಟಗಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.ಕಛೇರಿ ಪ್ರತಿ.
4. ಕಛೇರಿ ಪ್ರತಿ.

ಪು.ತಿ.ನೊ